


ಶ್ರೀಲಂಕಾದ ಕೊಲಂಬೊದಲ್ಲಿ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ಅಂಧ ಮಹಿಳಾ ತಂಡ



**ರಾಜ್ಯದ ಪಾಲಿಗೆ ಪ್ರತಿವರ್ಷದ ನವೆಂಬರ್ ಕನ್ನಡ ಮಾಸವಾದರೆ, 2025ರ ನವೆಂಬರ್ ಭಾರತೀಯ ಮಹಿಳಾ ಕ್ರೀಡಾಪಟುಗಳಿಗೆ 'ಸಾಧನೆಗಳ ಮಾಸ'. ಏಕದಿನ ಕ್ರಿಕೆಟ್ ವಿಶ್ವಕಪ್, ಅಂಧ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್, ಮಹಿಳಾ ಕಬಡ್ಡಿ ವಿಶ್ವಕಪ್, ಇದೇ ಮಾಸದಲ್ಲಿ ಭಾರತೀಯರ ಪಾಲಾಗಿದೆ. ಬಾಕ್ಸಿಂಗ್ ಮಹಿಳಾ ವಿಭಾಗದಲ್ಲೂ ಏಳು ಚಿನ್ನದ ಪದಕಗಳು ಸಿಕ್ಕಿದ್ದು ಇದೇ ತಿಂಗಳಲ್ಲಿ.**

■ **ಗಿರೀಶ ದೊಡ್ಡಮನಿ**

ಇನ್ನೇನು ಕೆಲವೇ ದಿನಗಳು ಕಳೆದರೆ ಜಗತ್ತು ಹೊಸ ವರ್ಷಕ್ಕೆ ಕಾಲಿಡಲಿದೆ. ಹೊಸ ಕನಸುಗಳು, ಭವ್ಯ ಭವಿಷ್ಯದ ಆಶಯಗಳೊಂದಿಗೆ ನವವರ್ಷ ಶುರುವಾಗಲಿದೆ. ಜೊತೆಗೆ ಕಳೆದುಹೋದ ವರ್ಷದ ಸಿಹಿ–ಕಹಿಯ ಮೆಲುಕು ಕೂಡ ಇರಲಿದೆಯಲ್ಲವೇ?

ಆದರೆ 2025ರ ನವೆಂಬರ್ ತಿಂಗಳನ್ನು ಮಾತ್ರ ಎಂದಿಗೂ ಮರೆಯಲಾಗದು. ಅದರಲ್ಲೂ ಭಾರತದ ಮಹಿಳೆಯರಿಗಂತೂ ಈ ಮಾಸ ಅವಿಸ್ಮರಣೀಯ. ಏಕೆಂದರೆ; ನವೆಂಬರ್‌ನಲ್ಲಿ ಮಹಿಳಾ ಕ್ರೀಡೆಯಲ್ಲಿ ಭಾರತೀಯ ವನಿತೆಯರ ಸಾಧನೆಗಳು ಸಾಲು ಸಾಲಾಗಿ ದಾಖಲಾದವು. ಭಾರತದ ಮಹಿಳಾ ಕ್ರೀಡೆಯ ಮಟ್ಟಿಗೆ 2025ರ ನವೆಂಬರ್ 'ಪಿಂಕ್ ಮಂಥ್' ಎಂಬುದರಲ್ಲಿ ಸಂಶಯವೇ ಇಲ್ಲ.

ಹರ್ಮನ್‌ಪ್ರೀತ್ ಕೌರ್ ಬಳಗದ ಏಕದಿನ ಕ್ರಿಕೆಟ್ ವಿಶ್ವಕಪ್ ವಿಜಯ. ಸತತ ಎರಡನೇ ವರ್ಷ ಕಬಡ್ಡಿ ವಿಶ್ವಕಪ್ ಜಯ. ವಿಶ್ವಕಪ್ ಬಾಕ್ಸಿಂಗ್ ಮಹಿಳಾ ವಿಭಾಗದಲ್ಲಿ ಭಾರತದ ಏಳು ಬಾಕ್ಸರ್‌ಗಳಿಗೆ ಚಿನ್ನ, ಅಂಧ ಮಹಿಳೆಯರ ಚೊಚ್ಚಲ ಟಿ20 ವಿಶ್ವಕಪ್ ಜಯಿಸಿದ ದೀಪಿಕಾ ಟಿ.ಸಿ. ಬಳಗ, ದಕ್ಷಿಣ ಕನ್ನಡ ಜಿಲ್ಲೆಯ ಇಶಾ ಶರ್ಮಾ ಅವರು ಚೆಸ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರಹೊಮ್ಮಿದ್ದು, ಕನ್ನಡತಿ ಪ್ರಣತಿ ಅರಸ್ ಅವರು ಗಾಲ್ಫ್‌ನಲ್ಲಿ ಮಾಡಿದ ಸಾಧನೆಗಳು ಇತಿಹಾಸದ ಪುಟಗಳಲ್ಲಿ ಸೇರಿದವು. ಒಂದೊಂದು ಸಾಧನೆಯ ಹಿಂದೆಯೂ ಛಲ, ಬಲ ಮತ್ತು ಪ್ರವಾಹದ ವಿರುದ್ಧ ಈಜಿದ ಸಾಹಸದ ಕಥೆಗಳಿವೆ.

***




ಅಂಧ ಮಹಿಳಾ ಕ್ರಿಕೆಟ್ ಆಟಗಾರ್ತಿ ವಿ. ಕಾವ್ಯಾ